Sl No.	Taluk	Expenditure during 99-2000 Rs. in lakhs
KODAGU		
1.	Virajpet	115.86
2.	Somwarapet	23.58
3.	Madikeri	114.74

ಲೋಕೋಪಯೋಗಿ ಇಲಾಖೆಯಲ್ಲಿ ಗ್ಯಾಂಗ್ ಮನ್‌ಗಳ ಕೊರತೆಯಿಂದ ರಸ್ತೆಗಳು ಹದಗೆಟ್ಟಿರುವುದು

4935 - ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಲೋಕೋಪಯೋಗಿ ಇಲಾಖೆಗೆ ಸಂಬಂಧಿಸಿದ ರಸ್ತೆಗಳ ದುರಸ್ಥಿಗಾಗಿ ಈ ಹಿಂದೆ ಗ್ಯಾಂಗ್‌ಮನ್‌ಗಳು ಇದ್ದು ಈಗ ಗ್ಯಾಂಗ್‌ಮನ್‌ಗಳು ಕಡಿಮೆಯಾಗಿರುವುದರಿಂದ ರಸ್ತೆಗಳು ಹಾಳಾಗಿದ್ದು ವಾಹನ ಸಂಚಾರಕ್ಕೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಹಾಗಿದ್ದಲ್ಲಿ ಇದರ ಬಗ್ಗೆ ಕೈಗೊಂಡ ಕ್ರಮಗಳಾವುವು?*

ಇ) *ಹೊಸದಾಗಿ ಗ್ಯಾಂಗ್‌ಮನ್‌ಗಳನ್ನು ನೇಮಿಸಿಕೊಳ್ಳುವ ಪ್ರಸ್ತಾವನೆ ಸರ್ಕಾರದ ಮುಂದೆ ಇದೆಯೇ? ಹಾಗಿದ್ದಲ್ಲಿ ಯಾವಾಗ ನೇಮಕ ಮಾಡಿಕೊಳ್ಳಲಾಗುವುದು?*

ಶ್ರೀ ಧರಮ್ ಸಿಂಗ್ (ಲೋಕೋಪಯೋಗಿ ಸಚಿವರು) :

ಅ) ಮತ್ತು ಆ) ಗ್ಯಾಂಗ್ ಮನ್ ನಿವೃತ್ತಿಯಾದ ನಂತರ ಅಭಾವವಿರುವೆಡೆ ರಸ್ತೆ ದುರಸ್ತಿಯನ್ನು ಗುತ್ತಿಗೆ ಕರೆದು ಮಾಡಲಾಗುತ್ತಿದೆ. ರಸ್ತೆಯನ್ನು ವಾಹನ ಸಂಚಾರಕ್ಕೆ ಅನುವು ಮಾಡಿಕೊಡಲಾಗುತ್ತಿದೆ.

ಇ) ಇಲ್ಲ.

ಸೂಳ್ಯ ಕ್ಷೇತ್ರದಲ್ಲಿ ಲೋಕೋಪಯೋಗಿ ರಸ್ತೆ ದುರಸ್ಥಿ

4936 - ಶ್ರೀ ಅಂಗಾರ ಎಸ್. (ಸೂಳ್ಯ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಸುಬ್ರಹ್ಮಣ್ಯ-ಧರ್ಮಸ್ಥಳ-ಕಾರ್ಕಳ-ಬೆಳ್ತಂಗಡಿ-ಉಡುಪಿ ರಾಜ್ಯ ರಸ್ತೆಯು ಸುಳ್ಯ ವಿಧಾನಸಭಾ*